ಶಿಗ್ಗಾಂವ್ ಮತ್ತು ಸವಣೂರ್ ತಾಲ್ಲೂಕುಗಳಲ್ಲಿ ವಿದ್ಯುತ್ತಿನ ಅಭಾವ

2108: ಶ್ರೀ ಎಂ.ಸ. ಕುನ್ನೂರು (ಶಿಗ್ಗಾಂವ್):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ವಿದ್ಯುತ್ತಿನ ಅಭಾವ ಬಹಳ ಇದ್ದು ಇದರಿಂದ ತಾಲ್ಲೂಕಿಗೆ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಶಿಗ್ಗಾಂವ್‌ದಲ್ಲಿ ಸವಣೂರಿನಲ್ಲಿ ಈಗಿರುವ 110 ಕೆವಿ ಸ್ಟೇಷನ್ ಎಷ್ಟು ಕಿ.ಮೀ. ಅಂತರದಲ್ಲಿ ಹಾದು ಹೋಗಿದೆ;

ಇ) ಹಾಗಿದ್ದಲ್ಲಿ ಶಿಗ್ಗಾಂವ್ ಅಥವಾ ಸವಣೂರಿನಲ್ಲಿ ಈಗಿರುವ 33 ಕೆವಿ ಸ್ಟೇಷನ್ ಬದಲಾಗಿ 110 ಕೆವಿ ಸ್ಟೇಷನ್ ಕೂಡಲೇ ಪ್ರಾರಂಭ ಮಾಡಲಾಗುವುದೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಸವಣೂರಿನಿಂದ ಸುಮಾರು 7 ಕಿ.ಮೀ. ಅಂತರದಲ್ಲಿ 110 ಕೆವಿ ಹುಬ್ಬಳ್ಳಿ ಹಾವೇರಿ ವಿದ್ಯುತ್ ಪ್ರಸರಣಾ ಲೈನು ಹಾದು ಹೋಗಿರುತ್ತದೆ.

ಇ) ಶಿಗ್ಗಾಂವ್‌ದಲ್ಲಿ 110 ಕೆವಿ ಸಬ್–ಸ್ಟೇಷನ್ ಸ್ಥಾಪನೆ ಬಗ್ಗೆ ಪ್ರಸ್ತಾವನೆಯು ಮಂಡಳಿಯ ಮುಂದೆ ಸಧ್ಯಕ್ಕಿರುವುದಿಲ್ಲ. ಸವಣೂರಿನಲ್ಲಿ 110 ಕೆವಿ ಸಬ್–ಸ್ಟೇಷನ್ ಸ್ಥಾಪನೆ ಮಾಡುವ ಬಗ್ಗೆ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ. ಆದರೆ ಈಗಾಗಲೇ 110 ಕೆವಿ ಹುಬ್ಬಳ್ಳಿ–ಹಾವೇರಿ ವಿದ್ಯುತ್ ಲೈನು ಓವರ್ ಲೋಡ್ ಆಗಿರುವುದರಿಂದ, ಈ ಓವರ್ ಲೋಡ್ ಪರಿಸ್ಥಿತಿಯನ್ನು ನಿವಾರಿಸಲು ಹಾವೇರಿಯಲ್ಲಿ ಒಂದು 220:11 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು 8ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸ್ಥಾಪಿಸಲು ಉದ್ದೇಶಿಸಿದೆ. ಈ ಕೆಲಸವು ಮುಗಿದ ನಂತರ ಸವಣೂರಿನಲ್ಲಿ 10 ಕೆವಿ ಸಬ್–ಸ್ಟೇಷನ್ ಸ್ಥಾಪನೆ ಬಗ್ಗೆ ಪರಿಶೀಲಿಸಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ರಸ್ತೆಗಳ ಡಾಂಬರೀಕರಣ

2109: ಶ್ರೀ ಎಂ.ಪಿ. ಕುನ್ನೂರ (ಶಿಗ್ಗಾಂವ್):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1991–92 ಹಾಗೂ 1992–93ರ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ಡಾಂಬರೀಕರಣ ಮಾಡಲಾಗಿರುವ ರಸ್ತೆಯ ಉದ್ದವೆಷ್ಟು; (ತಾಲ್ಲೂಕ್‌ವಾರು ಮಾಹಿತಿ ನೀಡುವುದು)

ಆ) ಪ್ರಸಕ್ತ ಸಾಲಿನಲ್ಲಿ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕ್‌ಗಳಲ್ಲಿ ಡಾಂಬರೀಕರಣ ಮಾಡಲು ಕೈಗೆತ್ತಿಕೊಳ್ಳಲಾಗಿರುವ ರಸ್ತೆಯ ಉದ್ದವೆಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):– ಅ) ಧಾರವಾಡ ಜಿಲ್ಲೆಯಲ್ಲಿ 1991–92 ಹಾಗೂ 92–93ನೇ ಸಾಲಿನಲ್ಲಿ ಅನುಕ್ರಮವಾಗಿ 88.95 ಕಿಮೀ ಹಾಗೂ 63.80 ಕಿಮೀ ರಸ್ತೆಯನ್ನು ಡಾಂಬರೀಕರಣ ಮಾಡಲಾಗಿದೆ. ತಾಲ್ಲೂಕುವಾರು ವಿವರ